ಎಲ್ಲವನ್ನೂ ಒಪ್ಪಿಕೊಳ್ಳಲಾರರು. ಅದಕ್ಕೇ ಶ್ರೀರಾಮಕೃಷ್ಣರು ಕರೆಕೊಡುತ್ತಾರೆ, "ಇನ್ನೊಂದು ಕೈಯನ್ನೂ ಸಡಿಲಬಿಡು. ಯಾವುದಕ್ಕೂ ಅಂಜಬೇಡ. ನಿತ್ಯ, ಲೀಲೆ –ಎರಡನ್ನೂ ಒಪ್ಪಿಕೋ" ಎಂದು.

**೪. ಮತಾಂಧರಾಗಬಾರದು:** ಭಕ್ತನಾದವನು ಧರ್ಮಾಂಧನಾಗಬಾರದು. ಅಂತಹ ಒಬ್ಬ ಭಕ್ತನ ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅವನ ಹೆಸರು 'ಘಂಟಾಕರ್ಣ' ಎಂದು. ಅವನು ಶಿವನನ್ನು ಮಾತ್ರ ಪೂಜಿಸುತ್ತಿದ್ದ. ಇತರ ದೇವದೇವತೆಗಳನ್ನು ದ್ವೇಷಿಸುತ್ತಿದ್ದ. ಒಮ್ಮೆ ಶಿವ ಹರಿಹರರೂಪದಲ್ಲಿ ಅವನ ಎದುರು ಕಾಣಿಸಿಕೊಂಡನು. ಒಂದು ಭಾಗ ಹರಿ; ಇನ್ನೊಂದು ಭಾಗ ಹರ. ಘಂಟಾಕರ್ಣನು ಶಿವನ ಭಾಗಕ್ಕೆ ಮಾತ್ರ ಪೂಜೆಮಾಡಿದನು. ಊದಿನ ಕಡ್ಡಿ ಹಚ್ಚುವಾಗ, ಅದರ ಸುವಾಸನೆ ವಿಷ್ಣುವಿನ ಮೂಗಿಗೆ ಹೋಗಬಾರದೆಂದು, ಆ ಭಾಗದ ಮೂಗಿನ ಹೊಳ್ಳೆಯನ್ನು ಮುಚ್ಚಿಬಿಟ್ಟನು. ಶಿವನು ಎಷ್ಟು ಬುದ್ಧಿಹೇಳಿದರೂ ಕೇಳಲಿಲ್ಲ. ಇನ್ನೂ ಹೆಚ್ಚು ವಿಷ್ಣುವನ್ನು ದ್ವೇಷಿಸುತ್ತಿದ್ದನು. ಅವನನ್ನು ತಮಾಷೆ ಮಾಡಲು, ಮಕ್ಕಳು ಬೇಕೆಂತಲೇ ವಿಷ್ಣುವಿನ ಹೆಸರನ್ನು ಗಟ್ಟಿಯಾಗಿ ಅವನ ಮುಂದೆ ಹೇಳುವರು. ಅದನ್ನು ಕೇಳಬಾರದೆಂದು ಅವನು ತನ್ನ ಕಿವಿಗೆ ಗಂಟೆಯೊಂದನ್ನು ಕಟ್ಟಿಕೊಂಡನು. ಇದಕ್ಕೇ ಅವನಿಗೆ 'ಘಂಟಾಕರ್ಣ'ನೆಂದು ಹೆಸರಾಯಿತು. ಈ ಬಗೆಯ ಮತಾಂಧತೆಯ ವಿಷಯಲ್ಲಿ ಶ್ರೀರಾಮಕೃಷ್ಣರು ಹೀಗೆ ಹೇಳುವರು: "ಅಜ್ಞಾನಿಯಾದ ಸಾಧಾರಣ ಮನುಷ್ಯ ತನ್ನ ಧರ್ಮವೇ ಅತ್ಯುತ್ತಮವಾದುದು ಎಂದು ಬೇಕಾದಷ್ಟು ಕೂಗಾಡುವನು. ಆದರೆ ನಿಜವಾದ ಜ್ಞಾನ ಅವನ ಮನಸ್ಸಿಗೆ ಹೊಳೆದ ಮೇಲೆ, ಎಲ್ಲಾ ಮತೀಯ ವ್ಯಾಜ್ಯಗಳೂ ಕೊನೆಗಾಣುವುವು." ನಿಸ್ವಾರ್ಥರಾದವರಲ್ಲಿ ಮತಾಂಧತೆ ಕಾಣಬರುವುದಿಲ್ಲ ಎಂದು ಶ್ರೀರಾಮಕೃಷ್ಣರ ಅಭಿಪ್ರಾಯ. ಯಾರು ಸ್ವಾರ್ಥಿಗಳು ಮತ್ತು ಕಪಟಿಗಳಾಗಿರು ವರೋ ಅವರಲ್ಲಿ ಮಾತ್ರ ಅದು ಕಾಣಬರುತ್ತದೆ.

**೫. ಪ್ರಾಪಂಚಿಕರೊಡನೆ ಬೆರೆಯಬಾರದು:** ಗಿಡ ಇನ್ನೂ ಚಿಕ್ಕದಾಗಿ ಇದ್ದಾಗ ಅದಕ್ಕೆ ಬೇಲಿ ಹಾಕಿ ಕಾಪಾಡಬೇಕು. ಅದು ಮರವಾದಾಗ ಅದಕ್ಕೆ ಬೇಲಿಯ ಆವಶ್ಯಕತೆ ಇರುವುದಿಲ್ಲ. ಹಾಗೆಯೇ ಸಾಧಕನು ಮೊದಮೊದಲು ಬಹಳ ಎಚ್ಚರಿಕೆಯಿಂದ ಇರಬೇಕು. ತನ್ನ ಆಧ್ಯಾತ್ಮಿಕಭಾವವನ್ನು ಜೋಪಾನದಿಂದ ಕಾಪಾಡಿಕೊಳ್ಳಬೇಕು. ಹೀಗಾಗಿ ಪ್ರಾಪಂಚಿಕ ರೊಡನೆ ಬಹಳವಾಗಿ ಬೆರೆಯಬಾರದು. ಇದು ಶ್ರೀರಾಮಕೃಷ್ಣರು ನಮಗೆ ನೀಡುವ ಎಚ್ಚರಿಕೆ. ಈ ವಿಷಯಕ್ಕೆ ಸಂಬಂಧಿಸಿದ ಹಾಗೆ ಚೈತನ್ಯ ಮಹಾಪ್ರಭುವಿನ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಶ್ರೀರಾಮಕೃಷ್ಣರು ಉದಾಹರಿಸುತ್ತಿದ್ದರು. ಚೈತನ್ಯ ಮಹಾಪ್ರಭುವನ್ನು ಗೌರಾಂಗ ಎಂದೂ ಕರೆಯುತ್ತಾರೆ. ಗೌರಾಂಗ ಒಮ್ಮೆ ಭಾವಸಮಾಧಿಯಲ್ಲಿ ಇರುವಾಗ ಸಮುದ್ರಕ್ಕೆ ಹೋಗಿಬಿದ್ದನು. ತೀರದಲ್ಲಿದ್ದ ಬೆಸ್ತರು ಅವನನ್ನು ಬಲೆಯಿಂದ ಮೇಲಕ್ಕೆತ್ತುತ್ತಿದ್ದರು. ಆ ಮಹಾಪುರುಷನ ಸಂಸರ್ಗದಿಂದ ಅವರೂ ಭಾವಸಮಾಧಿಗೆ ಹೋಗಿಬಿಟ್ಟರು. ತಮ್ಮ ಕೆಲಸವನ್ನೆಲ್ಲ ಬಿಟ್ಟು, "ಹರಿ ಬೋಲ್, ಹರಿ ಬೋಲ್" ಎನ್ನುತ್ತಾ ಭಜನೆ ಮಾಡಿಕೊಂಡು ಅಲೆಯಲಾರಂಭಿಸಿದರು. ನೆಂಟರಿಷ್ಟರು ಏನು ಮಾಡಿದರೂ ಈ ಜಾಡ್ಯದಿಂದ ಅವರನ್ನು ಬಿಡಿಸಲಾಗಲಿಲ್ಲ. ಕಡೆಗೆ ಗೌರಾಂಗದೇವನ ಹತ್ತಿರ ಬಂದು ತಮ್ಮ ಗೋಳನ್ನು ಹೇಳಿಕೊಂಡರು. ಗೌರಾಂಗ ಅವರಿಗೆ ಹೇಳುತ್ತಾನೆ, "ಒಬ್ಬ ಪುರೋಹಿತನ ಮನೆಯಿಂದ ಸ್ವಲ್ಪ ಅನ್ನವನ್ನು ತಂದು ಅವರ ಬಾಯಿಗೆ ಹಾಕಿ. ಅವರು ಗುಣವಾಗುತ್ತಾರೆ" ಎಂದು. ಅದರಂತೆ ಮಾಡಿದಾಗ ಅವರ ದಿವ್ಯಭಾವ ನಷ್ಟವಾಯಿತು. ಪ್ರಾಪಂಚಿಕರ ಸಂಪರ್ಕದಿಂದ ಉಂಟಾಗುವ ದುರವಸ್ಥೆ ಇಂಥದ್ದು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ.

**೬. ಬಾಹ್ಯ ಸಂಗತಿಗಳಲ್ಲಿಯೂ ಜೋಪಾನವಾಗಿರಬೇಕು:** ನಾವು ತೊಡುವ ಬಟ್ಟೆ, ನಮ್ಮ ಹಾವಭಾವ – ಇವುಗಳಲ್ಲಿಯೂ ನಾವು ಎಚ್ಚರದಿಂದ ಇರಬೇಕು ಎಂದು ಶ್ರೀರಾಮಕೃಷ್ಣರು ಬೋಧಿಸುತ್ತಾರೆ. ಅವರು ಹೇಳುತ್ತಾರೆ, "ವ್ಯಕ್ತಿಯೊಬ್ಬ ಠೀವಿಯಿಂದ ಎತ್ತರದ ಬೂಟುಗಳನ್ನು ಹಾಕಿಕೊಂಡರೆ, ಬರೀ ಇಂಗ್ಲಿಷ್ ಭಾಷೆಯನ್ನು ಮಾತ್ರ ಮಾತನಾಡುತ್ತಾನೆ. ಅಯೋಗ್ಯನಾದವನು ತಾನು ಕಾವಿ ಬಟ್ಟೆಯನ್ನು ಧರಿಸಿಕೊಂಡಾಗ, ತನ್ನ ಸಮಾನ ಇಲ್ಲ ಎಂದು ಮೆರೆಯುತ್ತಾನೆ; ಏನಾದರೂ ಗೌರವ ತೋರಿಸುವುದು ಕಡಮೆಯಾದರೆ ಅವನಿಗೆ ಕೋಪ ಬರುತ್ತದೆ" ಎಂದು. ರಾಜಸ ಗುಣವನ್ನು ಎತ್ತಿ ತೋರಿಸುವ ವೇಷಭೂಷಣಗಳು ಆ ಗುಣವನ್ನೇ ಉದ್ರೇಕಿಸುತ್ತವೆ. ಹಾಗೆಂದೇ ಸಾಧಕನಾದವನು, ನಟನೆಗಾಗಿ ಕೂಡ, ದುಷ್ಟನಂತೆ ವರ್ತಿಸಬಾರದು ಎಂದು ಶ್ರೀರಾಮಕೃಷ್ಣರು ಎಚ್ಚರಿಸುತ್ತಿದ್ದರು.

**೭. ಮೊದಲು ನಾವು ಶುದ್ಧರಾಗಬೇಕು, ಆಮೇಲೆ ಇತರರಿಗೆ ಬೋಧಿಸಬೇಕು:** "ದೇವರ ಬಗ್ಗೆ ತಿಳಿದವರಿಂದಲೇ ಕೇಳಬೇಕು. ಇಲ್ಲದಿದ್ದರೆ, ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ದಾರಿ ತೋರಿಸಿದ ಹಾಗೆ ಆಗುತ್ತದೆ" ಎಂದು ಕಠೋಪನಿಷತ್ತು ಎಚ್ಚರಿಸುತ್ತದೆ. ಹಾಗೆಯೇ ಧಾರ್ಮಿಕ ಪ್ರವಚನ ಮಾಡುವವನು ದೇವರಿಂದ ಆದೇಶವನ್ನು ಪಡೆದಿರಬೇಕು, ಇಲ್ಲದಿದ್ದರೆ ಅಂತಹವನ ಮಾತುಗಳಿಗೆ ಯಾವ ಅರ್ಥವೂ ಇರುವುದಿಲ್ಲ ಎಂದು ಶ್ರೀರಾಮಕೃಷ್ಣರೂ

ಎಚ್ಚರಿಸುತ್ತಾರೆ. ಈ ವಿಷಯದ ಬಗ್ಗೆ ಬೆಳಕು ಚೆಲ್ಲಲು ಅವರು ವಿನೋದದ ಒಂದು ಪ್ರಸಂಗವನ್ನು ಹೇಳುತ್ತಾರೆ: ಒಂದು ಹಳ್ಳಿಯಲ್ಲಿ ಪದ್ಮಲೋಚನ ಎಂಬುವವನು ಇದ್ದನು. ಅವನು ಒಂದು ಪಾಳುಬಿದ್ದ ದೇವಸ್ಥಾನಕ್ಕೆ ಹೋದನು. ಅಲ್ಲಿ ದೇವರ ಮೂರ್ತಿಯೇ ಇರಲಿಲ್ಲ. ಗೋಡೆಯ ಮೇಲೆ ಮರಗಳು ಬೆಳೆದುನಿಂತಿದ್ದವು. ಬಾವಲಿಗಳು ಕೂಡ ವಾಸವಾಗಿದ್ದವು. ಇಡೀ ದೇವಸ್ಥಾನ ಕೊಳಕಾಗಿತ್ತು. ಒಂದು ಸಂಜೆ ಹಳ್ಳಿಯ ಜನ ಶಂಖದ ಧ್ವನಿಯನ್ನು ಕೇಳಿದರು. ಯಾರೋ ದೇವರ ಪ್ರತಿಷ್ಠೆ ಮಾಡಿ, ಶಂಖವನ್ನು ಊದುತ್ತಿದ್ದಾರೆ ಎಂದು ಅವರು ಭಾವಿಸಿದರು. ಆದರೆ ಅವರೆಲ್ಲ ಬಂದು ನೋಡಿದಾಗ, ಪದ್ಮಲೋಚನನು ಒಂದು ಮೂಲೆಯಲ್ಲಿ ನಿಂತುಕೊಂಡು, ಶಂಖವನ್ನು ಊದುತ್ತಿದ್ದನು. ಅಲ್ಲಿ ಯಾವ ವಿಗ್ರಹವನ್ನೂ ಸ್ಥಾಪನೆ ಮಾಡಿರಲಿಲ್ಲ; ದೇವಸ್ಥಾನವನ್ನೂ ಗುಡಿಸಿರಲಿಲ್ಲ. ಮೇಲಿನ ಕಥೆಯ ಅಂತರಾರ್ಥವನ್ನು ಶ್ರೀರಾಮಕೃಷ್ಣರು ಹೀಗೆ ವಿವರಿಸುತ್ತಾರೆ: "ನಿನ್ನ ಹೃದಯಮಂದಿರಲ್ಲಿ ಭಗವಂತನನ್ನು ಪ್ರತಿಷ್ಠೆ ಮಾಡದೆ ಸುಮ್ಮನೆ ಗಲಾಟೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಮೊದಲು ನಿನ್ನನ್ನು ಶುದ್ಧಗೊಳಿಸಿಕೋ. ನಿರ್ಮಲ ಹೃದಯದಲ್ಲಿ ಭಗವಂತ ಬಂದು ಕುಳಿತುಕೊಳ್ಳುತ್ತಾನೆ. ಮೊದಲು ಅಲ್ಲಿ ದೇವರನ್ನು ಪ್ರತಿಷ್ಠೆ ಮಾಡು. ಅನಂತರ ನೀನು ಬೇಕಾದಷ್ಟು ಪ್ರವಚನಗಳನ್ನು ಮಾಡು. ಮುಂಚೆ ನೀರಿನ ಒಳಗೆ ಮುಳುಗು. ಅಲ್ಲಿರುವ ಮುತ್ತುರತ್ನಗಳನ್ನು ಹೊರಗೆ ತೆಗೆದುಕೊಂಡು ಬಾ. ಅನಂತರ ಬೇರೆ ಕೆಲಸಗಳನ್ನು ಮಾಡು."

### ಉಪಸಂಹಾರ

ಶ್ರೀರಾಮಕೃಷ್ಣರು ತಮ್ಮ ಮಾತುಕತೆಗಳ ನಡುವೆ ನೂರಾರು ದೃಷ್ಟಾಂತಕಥೆಗಳನ್ನು ಹೇಳುತ್ತಿದ್ದರು, ದೃಷ್ಟಾಂತಗಳನ್ನು ನೀಡುತ್ತಿದ್ದರು. ಇವೆಲ್ಲವೂ ಸರಳವಾಗಿವೆ; ಸ್ವಾರಸ್ಯಕರವಾಗಿವೆ; ನಮ್ಮ ಮನಸ್ಸನ್ನು ಮುಟ್ಟುತ್ತವೆ; ನಮ್ಮ ಹೃದಯದ ಬಾಗಿಲನ್ನು ತೆರೆಯುತ್ತವೆ. ಇಂತಹ ಕಥೆಗಳ ಭಂಡಾರವು 'ಶ್ರೀರಾಮಕೃಷ್ಣ ವಚನವೇದ' ಗ್ರಂಥದಲ್ಲಿ ನಮಗೆ ದೊರೆಯುತ್ತದೆ. ಅದಲ್ಲದೆ, ಕಥೆಗಳು ಮತ್ತು ದೃಷ್ಟಾಂತಗಳ ವಿಶೇಷ ಸಂಗ್ರಹವಿರುವ 'ಕಥೆಗಾರ ಶ್ರೀರಾಮಕೃಷ್ಣ' ಎಂಬ ಪುಸ್ತಕವೂ ರಚಿತವಾಗಿದೆ. ಇವುಗಳಲ್ಲೆಲ್ಲಾ ವೇದ, ವೇದಾಂತದ ಸಾರಭೂತ ಉಪದೇಶವು ನಮಗೆ ದೊರೆಯುತ್ತದೆ; ಆಧ್ಯಾತ್ಮಿಕ ಸಾಧನೆಗೆ ಉತ್ತಮ ಮಾರ್ಗದರ್ಶನ ಸಿಕ್ಕುತ್ತದೆ. ನಮ್ಮ ನೊಂದ ಮನಸ್ಸುಗಳಿಗೆ ಸಾಂತ್ವನವನ್ನು ಇವುಗಳಿಂದ ನಾವು ಪಡೆಯಬಹುದು; ನಮ್ಮ ಸಾಧನೆಗೆ ಉತ್ತೇಜನ ಮತ್ತು ಉತ್ಸಾಹಗಳನ್ನು ಹೊಂದಬಹುದು. ಇದಕ್ಕಾಗಿ ನಾವು 'ಶ್ರೀರಾಮಕೃಷ್ಣ ಕಥಾಪ್ರಪಂಚ'ವನ್ನು ಪ್ರವೇಶ ಮಾಡಬೇಕು; ಅಲ್ಲಿ ಆನಂದದಿಂದ, ಉಲ್ಲಾಸದಿಂದ ವಿಹರಿಸಬೇಕು. ಇಷ್ಟನ್ನೂ ನಾವು ಮಾಡಲಾಗದೇ?

## ಸ್ನೇಹಪ್ರಭ

**ಭಗವದ್ಗೀತೆಯಲ್ಲಿ ಹೇಳಿರುವ ಪ್ರೀತಿ, ಸ್ನೇಹ, ಸಹನೆ ಮುಂತಾದ ದೈವೀ ಗುಣಗಳನ್ನು ಅಭ್ಯಾಸ ಮಾಡುವುದಕ್ಕೆ ಗೊತ್ತುಪಡಿಸಿದ ವಿಧಾನ ಏನಾದರೂ ಇದೆಯೇ? ಇದ್ದರೆ ಅದನ್ನು ದಯವಿಟ್ಟು ವಿವರಿಸಿ.**

ಈಜು ಕಲಿಯಬೇಕಾದರೆ ನೀರಿಗಿಳಿಯಲೇಬೇಕು. ದೈವೀಗುಣಗಳು ನಮ್ಮ ಸ್ವಭಾವವಾಗಬೇಕಾದರೆ ಆ ಗುಣಗಳಿಗೆ ತಕ್ಕಂತೆ ನಾವು ನಡೆದುಕೊಳ್ಳಬೇಕು. ಪ್ರೀತಿಯ ಗುಣ ನಮಗೆ ಬರಬೇಕಾದರೆ ಇತರರನ್ನು ಪ್ರೀತಿಸುವುದನ್ನು ಕಲಿಯಬೇಕು. ಇತರರನ್ನು ನೋಯಿಸದೆ ಇರುವುದು, ಇತರರಿಗೆ ಸಹಾಯ ಮಾಡುವುದು, ಕಷ್ಟಕಾಲದಲ್ಲಿ ಸಾಂತ್ವನ ನೀಡುವುದು, ಇತರರ ಭಾವನೆಗಳಿಗೆ ಸ್ಪಂದಿಸುವುದು, ಸ್ವಾರ್ಥಭಾವನೆ ಇಲ್ಲದಿರುವುದು, ವ್ಯಾಪಾರ ಮನೋಭಾವ ಇಲ್ಲದಿರುವುದು – ಇವೇ ಮುಂತಾದವು ಪ್ರೀತಿಯ ಅಭಿವ್ಯಕ್ತಿಗಳು. ಇತರರ ತಪ್ಪನ್ನು ಮನ್ನಿಸುವುದು, ಪ್ರತೀಕಾರ ಮನೋಭಾವ ಇಲ್ಲದಿರುವುದು, ಕೋಪ ಮುಂತಾದ ನಿಷೇಧಾತ್ಮಕ ಭಾವೋದ್ವೇಗಕ್ಕೆ ಒಳಗಾಗದೇ ಇರುವುದು– ಇವೇ ಮುಂತಾದವು ಸಹನೆಯ ಲಕ್ಷಣಗಳು. ಹೀಗೆ ಪ್ರತಿಯೊಂದು ದೈವೀಗುಣಕ್ಕೂ ಅದಕ್ಕೆ ಅನುಗುಣವಾದ ಲಕ್ಷಣಗಳಿರುತ್ತವೆ. ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ದೈವೀಗುಣಗಳು ನಮ್ಮ ಜೀವನದಲ್ಲಿ ಸ್ವಾಭಾವಿಕವಾಗುತ್ತವೆ. ಪ್ರೀತಿಯೇ ಪ್ರಧಾನ. ಅದೊಂದಿದ್ದರೆ ಇತರ ಗುಣಗಳು ಸ್ವಾಭಾವಿಕವಾಗಿ ಅದನ್ನು ಅನುಸರಿಸಿಕೊಂಡು ಬರುತ್ತವೆ – ರಾಣಿ ಹುಳವನ್ನು ಇತರ ಜೇನ್ನೊಣಗಳು ಅನುಸರಿಸಿಕೊಂಡು ಹೋಗುವಂತೆ. ದೈವೀಗುಣಗಳು ನಮಗೆ ಬರಬೇಕಾದರೆ ನಾವು ದೈವತ್ವಕ್ಕೆ ಏರಬೇಕಾಗುತ್ತದೆ. ನಾವು ಸಾಮಾನ್ಯ ಮನುಷ್ಯರಂತೆ ಸ್ವಾರ್ಥಸಾಧನೆಯಲ್ಲೇ ತೊಡಗಿದ್ದರೆ ದೈವೀಗುಣಗಳನ್ನು ಪಡೆಯುವುದು ಸಾಧ್ಯವಾಗುವುದಿಲ್ಲ. ಸ್ವಾರ್ಥತೆಯ ಬೆಳ್ಳುಳ್ಳಿ ವಾಸನೆ ಇರುವಲ್ಲಿ ದೈವೀಗುಣಗಳು ಹತ್ತಿರ ಸುಳಿಯುವುದಿಲ್ಲ! ಸ್ವಾರ್ಥತೆ ಮಂಜುಗಡ್ಡೆ ಇದ್ದಂತೆ– ಎಲ್ಲ ತಣ್ಣಗೆ, ಪ್ರೀತಿಯ ಬಿಸಿ ಅಲ್ಲಿರುವುದಿಲ್ಲ. ಮಂಜುಗಡ್ಡೆ ಒಂದು ಪ್ರದೇಶಕ್ಕೆ (Space) ಸೀಮಿತವಾಗಿರುವಂತೆ ಸ್ವಾರ್ಥಿಯೂ ತನ್ನ ವ್ಯಕ್ತಿತ್ವಕ್ಕೆ ಸೀಮಿತನಾಗಿರುತ್ತಾನೆ. ಮಂಜುಗಡ್ಡೆಯು ನೀರಾದಾಗ ಹೆಚ್ಚು ವಿಸ್ತರಿಸುತ್ತದೆ, ತನ್ನ ಪ್ರದೇಶೀಯ (Spacial) ಮಿತಿಯನ್ನು ಮೀರಿ ಹರಡುತ್ತದೆ. ಹಾಗೆಯೇ ನಮ್ಮ ಸ್ವಾರ್ಥತೆಯನ್ನು ತೊರೆದಾಗ ನಮ್ಮ ವ್ಯಕ್ತಿತ್ವ ವಿಸ್ತರಿಸುತ್ತದೆ. ಈ ರೀತಿಯ ವ್ಯಕ್ತಿತ್ವ ವಿಸ್ತರಣೆಯಿಂದ ದೈವೀಗುಣಗಳು ನಮ್ಮನ್ನು ಅಲಂಕರಿಸುತ್ತವೆ. ನೀರನ್ನು ಇನ್ನೂ ಕಾಯಿಸಿದಾಗ ಆವಿಯಾಗಿ ಮೇಲೇರುತ್ತದೆ. ಹಾಗೆಯೇ ದೈವೀಗುಣಗಳ ಶಾಖದಿಂದ ನಮ್ಮ ವ್ಯಕ್ತಿತ್ವವನ್ನು ಕಾಯಿಸಿದಾಗ ಅದು ಕರಗಿ ಆಧ್ಯಾತ್ಮಿಕವಾಗಿ ಮೇಲೇರುತ್ತದೆ. ಒಮ್ಮೆ ದೇಹದ ಅಂಗಗಳಿಗೆ ಹೊಟ್ಟೆಯ ಮೇಲೆ ತುಂಬ ಕೋಪ ಬಂತು. "ನಾವು ಮಾತ್ರ ಆಹಾರವನ್ನು ತಂದು ಹೊಟ್ಟೆಗೆ ಹಾಕಬೇಕು, ಅದು ನಮಗಾರಿಗೂ ಕೊಡದೆ, ತಾನೇ ತಿಂದು ತೇಗುತ್ತದೆ, ತಾನು ಏನೂ ಮಾಡುತ್ತಲೇ ಇಲ್ಲ. ಇದೆಂಥ ಅನ್ಯಾಯ" ಎಂದು ಅವು ಭಾವಿಸಿದವು. ಇನ್ನು ಮೇಲೆ ಹೊಟ್ಟೆಗೆ ಅನ್ನ ಹಾಕುವುದಿಲ್ಲ ಎಂದು ಅವು ನಿರ್ಧರಿಸಿದವು. ಕೈ ಆಹಾರವನ್ನು ಬಾಯಿಗೆ ಹಾಕುವುದನ್ನು ನಿಲ್ಲಿಸಿತು. ಹಲ್ಲು ಅಗಿಯುವುದನ್ನು ನಿಲ್ಲಿಸಿತು. ಗಂಟಲು ನುಂಗುವುದನ್ನು ನಿಲ್ಲಿಸಿತು. ಈಗ ಹೊಟ್ಟೆ ಬುದ್ಧಿ ಕಲಿಯುತ್ತದೆ ಎಂದು ಅವುಗಳೆಲ್ಲ ಭಾವಿಸಿದವು. ಆದರೆ ಇದರ ಪರಿಣಾಮವಾಗಿ ಇಡೀ ದೇಹ ಸೊರಗ ತೊಡಗಿತು; ಎಲ್ಲ ಅಂಗಗಳೂ ಶಕ್ತಿಯನ್ನು ಕಳೆದುಕೊಂಡವು. ಪರಸ್ಪರ ಸಹಾಯದಿಂದ ಮಾತ್ರವೇ ಎಲ್ಲರಿಗೂ ಒಳಿತಾಗುವುದೆಂಬ ಪಾಠವನ್ನು ಹೀಗೆ ಅಂಗಗಳು ಕಲಿತವು. ಹೀಗೆ ಸ್ವಾರ್ಥರಹಿತ ಪರಸ್ಪರ ಸಹಕಾರದಿಂದ ಮಾತ್ರ ಎಲ್ಲ ದೈವೀಗುಣಗಳೂ ನಮ್ಮದಾಗುತ್ತವೆ. (ಬರಹ : ಸ್ವಾಮಿ ನಿತ್ಯಸ್ಥಾನಂದ)

# ಸೇವೆ ಮತ್ತು ಧರ್ಮಶಿಕ್ಷಣ ಕೇಂದ್ರಗಳಾಗಿ ನಮ್ಮ ದೇಗುಲಗಳು– ಒಂದು ಕಾರ್ಯಯೋಜನೆ



ಸಂಸ್ಕೃತಿ ರಕ್ಷಣೆ

ಸ್ವಾಮಿ ಮುಕ್ತಿದಾನಂದ

**ಜನಸಾಮಾನ್ಯರಲ್ಲಿ ಸನಾತನಧರ್ಮದ ಪ್ರಸಾರವನ್ನು ಶೈಕ್ಷಣಿಕ ಮಾಧ್ಯಮದ ಮೂಲಕ ಮಾಡಲು ಧರ್ಮನಿರಪೇಕ್ಷವೆಂದು ಹೇಳಿಕೊಳ್ಳುವ ನಮ್ಮ ದೇಶದಲ್ಲಿ ಮಾತ್ರ ಅಡ್ಡಿ ಆತಂಕಗಳು ಕಂಡುಬರುತ್ತಿರುವುದು ಸಹಜವಾದರೂ ಅತ್ಯಂತ ವಿಷಾದನೀಯ. ಇಂಥ ಸಂಕೀರ್ಣ ಪರಿಸ್ಥಿತಿಯಲ್ಲಿ ದೇವಸ್ಥಾನಗಳು ವಹಿಸಬೇಕಾದ ಸಮಾಜಮುಖಿ ಪಾತ್ರದ ಒಂದು ಪರಿಣಾಮಕಾರಿ ಕಾರ್ಯಯೋಜನೆಯನ್ನು ಈ ಲೇಖನದಲ್ಲಿ ಕೊಡಲಾಗಿದೆ. ಇದರ ರೂಪುರೇಖೆಗಳನ್ನು ನಿರ್ದಿಷ್ಟವಾಗಿ ನೀಡಿರುವ ಪೂಜ್ಯ ಸ್ವಾಮೀಜಿಯವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದಾರೆ.**

### ಇಂದಿನ ಪರಿಸ್ಥಿತಿ

ನಮ್ಮ ಭಾರತೀಯ ಸನಾತನಧರ್ಮ ಸಾವಿರಾರು ವರ್ಷಗಳಿಂದ ಹರಿದು ಬಂದ ವಿಪುಲವೂ ಶ್ರೇಷ್ಠವೂ ಆದ ಜ್ಞಾನ ಸಂಪತ್ತುಳ್ಳದ್ದು. ಅದರ ಇಂದಿನ ಶೋಚನೀಯ ಪರಿಸ್ಥಿತಿಯನ್ನು ಗಮನಿಸಿದರೆ, ಇದಕ್ಕೆ ಕಾರಣ ನಮ್ಮ ಕೋಟ್ಯಂತರ ದೇಶಬಾಂಧವರಿಗೆ ಧರ್ಮಶಿಕ್ಷಣವು ದೊರೆಯದಿರುವುದೇ ಎಂದು ಹೇಳಬಹುದು. ಎಲ್ಲೋ ಕೆಲವರಿಗೆ ಮಾತ್ರವೇ ನಿಜವಾದ ಧರ್ಮಶಿಕ್ಷಣ ಹಾಗೂ ಅನುಷ್ಠಾನದ ತರಬೇತಿ ಸಿಕ್ಕುವ ಅವಕಾಶವಿದೆ. ಹಳ್ಳಿಗಳಲ್ಲಿರುವ ಸಾವಿರಾರು ಜನರಿಗೆ ಹಾಗೂ ಪಟ್ಟಣದಲ್ಲಿ ಆಧುನಿಕ ಶಿಕ್ಷಣ ಪಡೆಯುತ್ತಿರುವ ಯುವಜನಾಂಗಕ್ಕೆ ಕೂಡ 'ಧರ್ಮಶಿಕ್ಷಣ'ವು ಕಿಂಚಿತ್ತಾದರೂ ಸಿಗುವ ಯಾವ ಸಾಧ್ಯತೆಯೂ ಈಗ ಕಂಡುಬರುತ್ತಿಲ್ಲ. ಹೀಗಾಗಿ ನಮ್ಮ ಜನಾಂಗ ಧರ್ಮದ ಜ್ಞಾನವಿಲ್ಲದೆ, ಅದರ ಅನುಷ್ಠಾನವನ್ನೂ ಮಾಡದೆ ಒಂದು ರೀತಿಯ ವಿಚಿತ್ರವಾದ  ನಾಸ್ತಿಕತೆಯಿಂದ ತೊಳಲಾಡುತ್ತಿದೆ.

ನಮ್ಮ ಸಂಸ್ಕೃತಿಯಲ್ಲಿ ಹುಟ್ಟಿದ ಮಗುವೊಂದು ಕುಟುಂಬದಿಂದ, ಶಾಲೆಯಿಂದ, ಮಾಧ್ಯಮಗಳಿಂದ, ಹಿರಿಯರಿಂದ ನಮ್ಮ ಸಂಸ್ಕೃತಿಯ ಪ್ರಾಥಮಿಕ ಪಾಠಗಳನ್ನಾದರೂ ಕಲಿಯಲಾಗದಿದ್ದರೆ, ಅದು ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಅನಾಥವಾಗಿ ಬೆಳೆಯುವ ದುರಂತವನ್ನು ಎದುರಿಸಬೇಕಾದೀತು. ಹೀಗಾಗಿ ಭವ್ಯವಾದ ಈ ಹಿಂದೂಧರ್ಮವನ್ನು, ನಮ್ಮ ಸಮಯಪ್ರಜ್ಞೆಯನ್ನು ಉಪಯೋಗಿಸಿ, ಕಾಲೋಚಿತವಾಗಿ ರಕ್ಷಿಸಿಕೊಳ್ಳಬೇಕಾದ ಅತ್ಯಂತ ತುರ್ತಿನ ಪರಿಸ್ಥಿತಿಯಲ್ಲಿ ನಾವಿದ್ದೇವೆ.

**ನಮ್ಮ ಧರ್ಮದ ಔಚಿತ್ಯವೇನು?  ನಮ್ಮ ಸಂಸ್ಕೃತಿಯ ಹಿರಿಮೆ ಏನು? ನಮ್ಮ ಆಧ್ಯಾತ್ಮಿಕ ಪರಂಪರೆ ಎಂಥದ್ದು? ಇದರ ಅನುಷ್ಠಾನ ಹೇಗೆ?** –  ಇವೆಲ್ಲದರ ಪರಿವೆಯೇ ಇಲ್ಲದ ಅನಕ್ಷರಸ್ಥ ಬಡಕುಟುಂಬಗಳು ಹಾಗೂ ಇಂದಿನ ವಿದ್ಯಾವಂತ ಯುವಜನಾಂಗ ಯಾವುದೇ ರೀತಿಯ ಅಧ್ಯಾತ್ಮ ಮಾರ್ಗದರ್ಶನವಿಲ್ಲದೆ, ಅದಕ್ಕೆ ಬೇಕಾದ ಯಾವ ಆಧಾರ, ಅವಲಂಬನೆಗಳೂ ಇಲ್ಲದೆ, ತಮ್ಮನ್ನು ಧಾರ್ಮಿಕ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳದ ಅತಂತ್ರ ಸ್ಥಿತಿಯಲ್ಲಿದ್ದಾರೆ. ಈ ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಭಾರತವು ಭೌಗೋಳಿಕವಾಗಿ ಅಸ್ತಿತ್ವದಲ್ಲಿದ್ದರೂ ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಅನ್ಯಮತೀಯವೂ ಹಾಗೂ ಪರಕೀಯ ಸಂಸ್ಕೃತಿಯಿಂದ ಕೂಡಿದ ಭೂಭಾಗವೂ ಆಗುವುದರಲ್ಲಿ ಸಂಶಯವೇ ಇಲ್ಲ.

### ದೇವಸ್ಥಾನಗಳ ಪಾತ್ರ

ಈ ಧರ್ಮನಿರಪೇಕ್ಷ ದೇಶದಲ್ಲಿ ಇಲ್ಲಿನ ಮೂಲಸಂಸ್ಕೃತಿಯನ್ನು ಕಾಪಾಡಬೇಕಾಗಿದ್ದರೆ ಚರ್ಚು, ಮಸೀದಿ, ರಾಮಕೃಷ್ಣ ಮಿಷನ್ ಮಾದರಿಯಲ್ಲಿ, ನಮ್ಮ ದೇವಸ್ಥಾನಗಳನ್ನು ಅವುಗಳ ಪೂಜಾಕೈಂಕರ್ಯದ ಜೊತೆಗೆ, ಸಕ್ರಿಯವಾದ ಧರ್ಮಶಿಕ್ಷಣ ಕೇಂದ್ರ

ಹಾಗೂ ಸೇವಾಕೇಂದ್ರಗಳನ್ನಾಗಿಯೂ ಪರಿವರ್ತಿಸಲೇಬೇಕು. ನಮ್ಮ ಶಿಕ್ಷಣ, ಸಮಾಜ ಹಾಗೂ ಮಾಧ್ಯಮಗಳು ಆತ್ಯಂತಿಕ ಪರಿಣಾಮದ ಬಗ್ಗೆ ಚಿಂತಿಸದೆ, ಮೂಲ ಸದುದ್ದೇಶವನ್ನು ಮರೆತು, ಜಾತ್ಯತೀತತೆಯ ಇತ್ತೀಚಿನ ವಿಕೃತ ಸ್ವರೂಪದ ನೆಪದಲ್ಲಿ, ಸನಾತನ ಸಂಸ್ಕೃತಿಯ ಪ್ರಸಾರವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಅಸಮರ್ಥವಾಗಿವೆ. ಅಂತಹ ಸನಾತನ ಸಂಸ್ಕೃತಿಯ ಸಂಕೇತಗಳಾದ ಮಠಗಳು, ಸಂಸ್ಥೆಗಳು, ಆಶ್ರಮಗಳು ಸಾಕಷ್ಟು ಸಂಖ್ಯೆಯಲ್ಲಿ ಇರದೆ ವಿರಳವಾಗಿರುವುದರಿಂದ, ನಮ್ಮ ಧರ್ಮ, ಸಂಸ್ಕೃತಿಗಳ ಬಗ್ಗೆ ಕನಿಷ್ಠ ಪ್ರಾಥಮಿಕ ತಿಳಿವಳಿಕೆಯಾದರೂ ಕೋಟ್ಯಂತರ ಜನರನ್ನು ತಲುಪುವುದು ಅಸಾಧ್ಯವಾಗಿದೆ. ಇದನ್ನು ದೇವಾಲಯಗಳ ಮೂಲಕ ಮಾತ್ರ ನಾವು ಪರಿಣಾಮಕಾರಿಯಾಗಿ ಮಾಡಲು ಸಾಧ್ಯ. ಹೀಗೆ ಸಾಮಾನ್ಯ ಜನರಿಗೆ ದೇವಾಲಯಗಳೇ ದಾರಿದೀಪವಾಗಬೇಕಾಗಿದೆ. ಆದ್ದರಿಂದ ಅನುಭಾವಿಗಳು ಮತ್ತು ಬಲ್ಲವರು ಇದರ ಕಡೆ ವಿಶೇಷ ಗಮನವನ್ನು ಹರಿಸಿ, ನಮ್ಮ ಧರ್ಮದ ಶ್ರದ್ಧಾಕೇಂದ್ರಗಳಾದ, ದೇಶದ ಉದ್ದಗಲಕ್ಕೂ ಹರಡಿರುವ ಅಸಂಖ್ಯಾತ ದೇವಾಲಯಗಳನ್ನು ಇಂದು ತುರ್ತಾಗಿ, ನಮ್ಮ ಧರ್ಮ, ಸಂಸ್ಕೃತಿಗಳ ರಕ್ಷಣೆಯ ಸೇವಾಕೇಂದ್ರಗಳಾಗಿ ಮಾರ್ಪಡಿಸುವುದು ಅನಿವಾರ್ಯ, ಅಪರಿಹಾರ್ಯ. ಈ ಮಾರ್ಗವೊಂದನ್ನು ಬಿಟ್ಟರೆ ಬೇರೆ ಯಾವ ಪ್ರಾಯೋಗಿಕ ಮಾರ್ಗವೂ ಕಂಡುಬರುತ್ತಿಲ್ಲ. ಇದಕ್ಕೆ ಅವಶ್ಯವಾದ ಒಂದು ಕಾರ್ಯವಿಧಾನವನ್ನು ರೂಪಿಸಿ ಯಶಸ್ವಿಗೊಳಿಸಬೇಕಾದ ಜವಾಬ್ದಾರಿ ಇದೀಗ ನಮ್ಮದು.

ಇತರ ಆಧ್ಯಾತ್ಮಿಕ ಸಂಸ್ಥೆಗಳಂತೆ, ಪೂಜೆ, ಉತ್ಸವಗಳ ಜೊತೆಜೊತೆಗೆ ಬಡಜನರಿಗೆ, ದೀನರಿಗೆ ಅವಶ್ಯವಾದ ಸೇವಾಕಾರ್ಯಗಳನ್ನು 'ನರನಾರಾಯಣ ಪೂಜಾಭಾವ' ದಿಂದ ಹಮ್ಮಿಕೊಳ್ಳುವ ಸೇವಾಕೇಂದ್ರಗಳನ್ನಾಗಿ ನಮ್ಮ ದೇಶದಲ್ಲಿರುವ ಸಾವಿರಾರು ದೇವಾಲಯಗಳನ್ನು ಪರಿವರ್ತಿಸಲು ನಾವು ಪ್ರಯತ್ನಿಸಬೇಕು. ಧರ್ಮ ಮತ್ತು ಆಧ್ಯಾತ್ಮಿಕ ತರಬೇತಿಯನ್ನು ಕೊಡುವ 'ಧಾರ್ಮಿಕಶಿಕ್ಷಣ ಕೇಂದ್ರ' ಗಳನ್ನಾಗಿಯೂ ಅವುಗಳನ್ನು ರೂಪಿಸಬೇಕು. ಅದಕ್ಕೆ ಆಯಾಯ ಪ್ರದೇಶದ ಹಾಗೂ ಸಮುದಾಯದ ಹಿರಿಯರು, ಚಿಂತಕರು, ಅಲ್ಲಿಯ ಆಡಳಿತ ಮಂಡಳಿಗಳ ಜತೆ ಸಮಾಲೋಚಿಸಿ, ತಮ್ಮ ಸಹಾಯಹಸ್ತವನ್ನು ನೀಡಿ, ಸೇವೆ ಮತ್ತು ಧರ್ಮಶಿಕ್ಷಣವನ್ನು ಜನಮನಕ್ಕೆ ತಲುಪಿಸುವಲ್ಲಿ ಕ್ರಿಯಾಶೀಲ ರಾಗಬೇಕು. ಶ್ರೀಮದ್‌ಭಾಗವತದಲ್ಲಿ ಒಂದು ಮಾತು ಬರುತ್ತದೆ: **ಅಥ ಮಾಂ ಸರ್ವಭೂತೇಷು ಭೂತಾತ್ಮಾನಂ ಕೃತಾಲಯಂ । ಅರ್ಹಯೇತ್ ದಾನಮಾನಾಭ್ಯಾಂ ಮೈತ್ರ್ಯಾಽಭಿನ್ನೇನ ಚಕ್ಷುಷಾ ॥** – "ನಾನು ಸಕಲ ಜೀವರಾಶಿಗಳ ಅಂತರಾತ್ಮನಾಗಿ ನೆಲೆಸಿರುತ್ತೇನೆ. ಆದ್ದರಿಂದ ನನ್ನನ್ನು ದಾನ, ಆದರ, ಮಿತ್ರಭಾವ ಮತ್ತು ತಾರತಮ್ಯವಿಲ್ಲದ ದೃಷ್ಟಿಕೋನಗಳಿಂದ ಆರಾಧಿಸಬೇಕು."

### ದೇವಸ್ಥಾನಗಳು ಸೇವಾಸ್ಥಾನಗಳಾಗಿ, ಧರ್ಮಾನುಷ್ಠಾನದ ಸಂಸ್ಕಾರಕೇಂದ್ರಗಳಾಗಿ ಕಾರ್ಯ ನಿರ್ವಹಿಸುವ ವಿಧಾನ

ದೇವಸ್ಥಾನಗಳನ್ನು ಧಾರ್ಮಿಕಶಿಕ್ಷಣ ಪ್ರಸಾರಕಾರ್ಯದ ಕೇಂದ್ರಗಳನ್ನಾಗಿ ಪರಿವರ್ತಿಸಬೇಕು. ಸಾಂಪ್ರದಾಯಿಕ ಪೂಜಾವಿಧಿ ವಿಧಾನಗಳಿಗೆ ಯಾವ ಅಡ್ಡಿಯೂ ಆಗದಂತೆ ಈ ಸಾಮಾಜಿಕ ಸೇವೆಯನ್ನು ನಡೆಸಬೇಕು. ಅದಕ್ಕಾಗಿ ದೇವ ಸ್ಥಾನಗಳು ಎರಡು ಹೊಸ ಅಂಗಗಳನ್ನು ಹೊಂದಿರುವುದು ಸೂಕ್ತ: **೧. ನರನಾರಾಯಣ ಸೇವಾದಳ ; ೨. ಧರ್ಮಶಿಕ್ಷಣ ಪ್ರಸಾರ ಕೇಂದ್ರ.**

೧. ದೇವಸ್ಥಾನದ ಆರ್ಥಿಕ ಉತ್ಪತ್ತಿಯ ನಿರ್ದಿಷ್ಟ ಭಾಗವನ್ನು ಮೇಲ್ಕಂಡ ಎರಡು ಉದ್ದೇಶಗಳಿಗೆ ವಿನಿಯೋಗಿಸ ಬೇಕು. ೨. ದೇವಸ್ಥಾನದಲ್ಲಿ ಸಂಗ್ರಹವಾದ ನಿಧಿಯಿಂದ ಜನಸಾಮಾನ್ಯರ ಆರೋಗ್ಯ, ಮಕ್ಕಳ ಶಿಕ್ಷಣ ಮತ್ತು ವಸತಿ ಸೌಕರ್ಯಕ್ಕೆ ಸಹಾಯ–ಮುಂತಾದ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು. ೩. ಮೇಲ್ಕಂಡ ಸೇವಾ ಉದ್ದೇಶಗಳಿಗಾಗಿ ಹಣವನ್ನು ದೇವಸ್ಥಾನದ ಉತ್ಪನ್ನದಿಂದಲ್ಲದೆ, ಪ್ರತ್ಯೇಕವಾಗಿಯೂ ಶ್ರದ್ಧಾವಂತ ಭಕ್ತರಿಂದ ಸಂಗ್ರಹಿಸಬೇಕು. ೪.ದೇವಾಲಯದ ಸುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿರುವ ಸನಾತನಧರ್ಮೀಯರ ಹೆಸರು, ವಿಳಾಸಗಳ ದಾಖಲೆಗಳನ್ನು ಸಂಗ್ರಹಿಸಿ, ಕಂಪ್ಯೂಟರ್‌ನ ಸಹಾಯದಿಂದ ಕ್ರೋಡೀಕರಿಸಿ ಅಧ್ಯಯನ ಮಾಡಬೇಕು. ೫. ಅನ್ಯಧರ್ಮದ ಮತ್ತು ನಾಸ್ತಿ ಕತೆಯ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆ ಇರುವ ಬಡಬಗ್ಗರ ಮತ್ತು ದೀನದಲಿತರ ಪೂರ್ಣವಿವರಗಳನ್ನೊಳಗೊಂಡ ಪಟ್ಟಿಯನ್ನು ತಯಾರಿಸಬೇಕು. ೬. ಸ್ವಯಂಸೇವಕರನ್ನು ಅಂತಹ ಸಾಮಾನ್ಯ ಜನರ ಮನೆಮನೆಗೆ ಕಳುಹಿಸಬೇಕು. ಕಾರ್ಯಕರ್ತರು ಈ ಜನರನ್ನು ಸಂಪರ್ಕಿಸಿ ಧರ್ಮದ ಬಗ್ಗೆ ತಿಳಿವಳಿಕೆಯನ್ನು ಕೊಟ್ಟು, ಅವರನ್ನು ದೇವಾಲಯದ ಸಂಪರ್ಕಕ್ಕೆ ತರಲು ಪ್ರಯತ್ನ ಮಾಡಬೇಕು. ೭. ಆಸಕ್ತ ಸಾಧುಸಂತರು, ಸಮರ್ಥರಾದ ಸ್ಥಳೀಯ ಶಿಕ್ಷಕರು ಹಾಗೂ ಸಮಾಜಸೇವಕರನ್ನು ಒಳಗೊಂಡ ಒಂದು ತರಬೇತಿ ಕಾರ್ಯಕ್ರಮವನ್ನು ನಿಯೋಜಿಸಬೇಕು. ಈ ಕಾರ್ಯಕ್ರಮದ ಮೂಲಕ ಕಾರ್ಯಕರ್ತರನ್ನು, ಸ್ವಯಂಸೇವಕರನ್ನು ತರಬೇತುಗೊಳಿಸುವ ಸೀಮಿತ ಅವಧಿಯ ಕಾರ್ಯಾಗಾರಗಳನ್ನು ನಿಯಮಿತವಾಗಿ, ಅನುಕೂಲತೆಗಳಿರುವ ದೇವಸ್ಥಾನಗಳಲ್ಲಿ ಏರ್ಪಡಿಸಬೇಕು. ೮. ಈ ರೀತಿಯ ತರಬೇತಿ ಕೇಂದ್ರಗಳನ್ನು ಎಲ್ಲ ವರ್ಗದ ಸ್ತ್ರೀಯರಿಗೂ ಏರ್ಪಡಿಸಬೇಕು. ೯. ಎಲ್ಲ ಸಮುದಾಯದವರಿಗೂ ಈ ಧಾರ್ಮಿಕಶಿಕ್ಷಣ ಪ್ರಸಾರ ಕಾರ್ಯಕ್ರಮದಲ್ಲಿ ಮುಕ್ತ ಅವಕಾಶವಿರಬೇಕು. ಮಕ್ಕಳಿಗೆ ವಿಶೇಷವಾಗಿ ಧಾರ್ಮಿಕ ಸಂಸ್ಕಾರ ಮತ್ತು ಸಂಸ್ಕೃತಿಯನ್ನು